ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

**ಕೆ.ಆರ್.ನಗರ**

**ಒ.ಎಸ್ 539/2017**

**ಪಿಡಬ್ಲ್ಯೂ1**

**ದಿನಾಂಕ 10-01-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು ಶ್ರೀ. ಎಲ್ ವಿ ಆರ್ ವಕೀಲರಿಂದ ಪ್ರತಿವಾದಿ ಪರ ವಕೀಲರುಃ

ಈ ಸರ್ವೇ ನಂಬರ್ 10/4  ಮೂಲತಃ ಸಣ್ಣಪ್ಪರವರಿಗೆ ಸೇರಿತ್ತು. ಅದಕ್ಕೆ ಸಂಬಂಧಪಟ್ಟಂತಹ ಇಂಡೆಕ್ಸ್ ಅಫ್ ಲ್ಯಾಂಡ್ಸ್ ಮತ್ತು ರೇಕಾರ್ಡ್ ಅಫ್ ರೈಟ್ಸ್ ಕೊಟ್ಟಿದೇನೋ ಇಲ್ಲವೊ ಗೊತ್ತಿಲ್ಲ ಆದರೆ ಕ್ರಯಪತ್ರ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತು 5-6 ಲಕ್ಷ ಬೆಲೆ ಬಾಳಬಹುದು. ನನ್ನ ತಾತನ ಹೆಸರು ತಿಮ್ಮೆಗೌಡ ಅವರಿಗೆ ಇಬ್ಬರು ಮಕ್ಕಳು ನನ್ನ ತಂದೆ ಗೋವಿಂದೇಗೌಡ ಹಾಗೂ ಚಂದಗೀರಿ ಗೌಡ 5 ನೇ ಪ್ರತಿವಾದಿ ಎಂದರೆ ಸರಿ.  ನಿಪಿ 1 ರಲ್ಲಿ ವಿಸ್ತೀರ್ಣ ಕ್ಕೆ ಮಾತ್ರ ನಾನು ದಾವೆ ಹೂಡಿದ್ದೇನೆ ಎಂದರೆ ಸರಿ.

2. ನಿಪಿ 1 ರ ಮೂಲಕ ಸ್ವತ್ತನ್ನು ಹೊರತುಪಡಿಸಿ ನನಗೆ ಸ.ನಂ. 10/1 ಮತ್ತು 10/4 ರಲ್ಲಿ ಬೇರೆ ಯಾವುದೇ ಪತ್ರದ ಮೂಲಕ ಹಕ್ಕು ಬಂದಿಲ್ಲ ಎಂದರೆ ಸರಿ. ನಿಪಿ 1 ರಲ್ಲಿ ಬರೆದಿರುವ ಚೆಕ್ಕು ಬಂದಿ ಸರಿಯಿದೆ ಎಂದರೆ ಸರಿ. ಕ್ರಯಪತ್ರದದಲ್ಲಿ ಬಂದಿರುವ ವಿಸ್ತೀರ್ಣ ವನ್ನು ನಿಪಿ 2 ರಂತೆ ನನ್ನ ತಂದೆ ಹಾಗೂ 5 ನೇಪ್ರತಿವಾದಿ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ 1 ಎಕರೆ 2 ಗುಂಟೆ ಜಮೀನನ್ನು ತಲಾ 21 ಗುಂಟೆ ಯಂತೆ ಭಾಗ ಮಾಡಿಕೊಂಡು ಉಳಿದ 9 ಗುಂಟೆ ಜಮೀನನ್ನು ನನ್ನ ತಂದೆ ಉಳಿಸಿಕೊಂಡರು ಎಂದು ಸಾಕ್ಷಿಯು ನುಡಿಯುತ್ತಾರೆ. ಈ ಬಗ್ಗೆ ಕ್ರಯಪತ್ರ ಹೊರತುಪಡಿಸಿ ಬೇರೆ ಯಾವುದೇ ದಾಖಲೆ ಇಲ್ಲ.

3. ನಿಪಿ 2 ರ ಮೂಲ ದಾಖಲೆ ನಮ್ಮ ವಕೀಲರ ಬಳಿ ಇದೆ. ನಿಪಿ 2 ರಲ್ಲಿ 3 ನೇ ಪುಟದಲ್ಲಿ ನನ್ನ ತಂದೆಯ ಹೆಸರಿಗೆ ಸ.ನಂ. 10/4 ರಲ್ಲಿ 15 ಗುಂಟೆ ಬಂದಿದೆ ಎಂದು ನಮೂದಿದೆ ಎಂದರೆ ಸರಿ. ಅದೇ ರೀತಿ  ಸ.ನಂ. 10/ಶಿ ರಲ್ಲಿ 101/2 ಗುಂಟೆ ಬಂದಿದೆ

ಎಂದು ನಮೂದಿದೆ ಎಂದರೆ ಸರಿ. ಅದೇ ರೀತಿ 5 ನೇ ಪ್ರತಿವಾದಿಗೂ ನಿಪಿ 2 ರಲ್ಲಿ ನಮೂದಿರುವಂತೆ ಭಾಗ ಬಂದಿದೆ ಎಂದರೆ ಸರಿ. ನಿಪಿ 2 ರಲ್ಲಿ ಎ ಶೆಡ್ಯೂಲ್‌ನ ಚೆಕ್ಕು ಬಂದಿ ಸರಿ ಇದೆ ಎಂದರೆ ಸರಿ. ನಿಪಿ 2 ರಲ್ಲಿ 5 ನೇ ಪ್ರತಿವಾದಿಗೆ ಬಿ ಶೆಡ್ಯೂಲ್ ಸ್ವತ್ತು ಬಂದಿದ್ದು ಅದರ ಚೆಕ್ಕು ಬಂದಿ ಸರಿಯಿದೆ ಇಂದರೆ ಚೆಕ್ಕು ಬಂದಿ ಹಾಗೂ ಕೋಡ್ ನಂಬರ್ಗಳು ತಪ್ಪು ಇದೆ ಅದನ್ನು 5 ನೇ ಪ್ರತಿವಾದಿ ಫೋರ್ಜರಿ ಮಾಡಿದ್ದಾರೆ ಹಾಗಾಗಿ ಈ ದಾವೆಯನ್ನು ಹೂಡಿದ್ದೇವೆ ಎಂದು ಸಾಕ್ಷಿಯು ನುಡಿಯುತ್ತಾರೆ. ಈ ಬಗ್ಗೆ ಪೊಲೀಸರಿಗೆ ಹಾಗೂ ತಹಶೀಲ್ದಾರರಿಗೆ ದೂರು ನೀಡಿದ್ದೇವು. ಸದರಿ ದೂರಿನ ದಾಖಲೆಯನ್ನು ನ್ಯಾಯಾಲಯಕ್ಕೆ ನೀಡಿಲ್ಲ. ನಿಪಿ 2 ರಲ್ಲಿ ಇರುವ ವಿಸ್ತೀರ್ಣ ಹಾಗೂ ಚೆಕ್ಕು ಬಂದಿ ಸರಿಯಿದೆ ಎಂದರೆ ಸರಿ.

4. ನಿಪಿ 2 ನ್ನು ಮಾಡುವ ಸಮಯದಲ್ಲಿ ಸ್ಥಳದಲ್ಲಿ ಅಳತೆ ಕ್ರಮ ಕೈಗೊಂಡಿದ್ದರು ಇಲ್ಲವೋ ನನಗೆ ಗೊತ್ತಿಲ್ಲ. ಇಲ್ಲಿಯವರೆಗೂ ದಾವಾ ಸ್ವತ್ತಿನಲ್ಲಿ ಯಾವುದೇ ಅಳತೆ ಮಾಡಿಸಿಲ್ಲ. ನಾವು 2 ಐಟಂಗೆ ದಾವೆ ಹೂಡಿದ್ದೇವೆ. ದಾವಾ ಐಟಂ ಗಳ ಬಗ್ಗೆ ನಿಪಿ 2 ರಲ್ಲಿ ನಮೂದು ಇದೆಯೇ ಎಂಬ ಪ್ರಶ್ನೆಗೆ 9 ಗುಂಟೆ ನಮೂದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ನಿಪಿ 8 ರಲ್ಲಿ ನಮೂದಿರುವ ವ್ಯಕ್ತಿಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನಿಪಿ 8 ರಲ್ಲಿ 16 ಗುಂಟೆ ಮಾತ್ರ ನಮೂದು ಇದೆ ಎಂದರೆ ಸರಿ. ಅದರಂತೆ ಸ.ನಂ.10/1 ರಲ್ಲಿ ವಿಸ್ತೀರ್ಣವಿರುವುದು 16 ಗುಂಟೆ ಮಾತ್ರ ಅಂದರೆ ಸರಿಯಲ್ಲ. ಸ.ನಂ.10/1 ರಲ್ಲಿ ಒಟ್ಟು ವಿಸ್ತೀರ್ಣ 26 ಗುಂಟೆ ಇದೆ ಎಂದು ಹೇಳಲು ಪಹಣಿ ಹಾಜರುಪಡಿಸಿಲ್ಲ. ನಿಪಿ 2 ರಂತೆ ನಾವು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ಸ.ನಂ.10 ಸುಮಾರು 15 ಪೋಡು ಆಗಿದೆ. ಪ್ರತಿವಾದಿಗಳು ನಮ್ಮ ಜಮೀನನ್ನು ಒತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ಅದನ್ನು ತೆರವು ಗೊಳಿಸಲು ಯಾವುದೇ ಅರ್ಜಿ ಹೂಡಿಲ್ಲ. ಸಾಕ್ಷಿಯು ಮುಂದುವರೆದು 23 ಗುಂಟೆ ಜಮೀನನ್ನು ಒತ್ತುವರಿ ಮಾಡಿದ್ದಾರೆ ಎಂದು ನುಡಿಯುತ್ತಾರೆ.

5. ಸ.ನಂ.10/1 ಹಾರಂಗಿ ನಾಲೆಗೆ ಸುಮಾರು 2.5 ಗುಂಟೆ ನನ್ನ ತಂದೆಯ ಇಸ್ಸೆಯ ಸ್ವತ್ತು ಹಾಗೂ 5 ನೇ ಪ್ರತಿವಾದಿಯ 2.5 ಗುಂಟೆ ಹೋಗಿದೆ. ನನ್ನ ತಂದೆ ಹಾಗೂ 5 ನೇ ಪ್ರತಿವಾದಿಯವರ 10 ಗುಂಟೆ ಒಟ್ಟು ಜಮೀನು ಹಾರಂಗಿ ನಾಲೆಗೆ ಹೋಗಿದೆ ಎಂದರೆ ಸರಿಯಲ್ಲ. ಈ ಬಗ್ಗೆ ದಾವಾ ಪ್ರತಿಯಲ್ಲಿ ನಮೂದಿಲ್ಲ. ಪ್ರಸ್ತುತ ನಮಗೂ 5 ನೇ ಪ್ರತಿವಾದಿಗೆ 1 ಎಕರೆ 1 ಗುಂಟೆ ಜಮೀನು ಉಳಿದಿದೆ ಎಂದರೆ

ಸ.ನಂ.10/1 ರಲ್ಲಿ 8 ಗುಂಟೆ ಉಳಿದಿದೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ